# ಶ್ರೀಲಂಕಾಗೆ ಭೇಟಿ ನೀಡಿದ ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್  (ಜೂನ್ 20, 2024)

ಜೂನ್ 20, 2024

ಜೂನ್ 20, 2024ರಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವರಾದ ಶ್ರೀ. ಡಾ. ಎಸ್. ಜೈಶಂಕರ್ ಅವರು ಶ್ರೀಲಂಕಾಕ್ಕೇ ಅಧಿಕೃತವಾಗಿ ಭೇಟಿ ನೀಡಿದ್ದರು. ಮರು ನೇಮಕಾತಿಯ ನಂತರ ವಿದೇಶಾಂಗ ವ್ಯವಹಾರಗಳ ಸಚಿವರು ಕೈಗೊಂಡ ಮೊದಲ ದ್ವಿಪಕ್ಷೀಯ ಭೇಟಿ ಇದಾಗಿದೆ. ಭಾರತದ ಸಾರ್ವತ್ರಿಕ ಚುನಾವಣೆಗಳ ನಂತರ ಹೊಸ ಸರ್ಕಾರದ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಭಾಗವಹಿಸಲು ಶ್ರೀಲಂಕಾದ ಅಧ್ಯಕ್ಷ ಘನತೆವೆತ್ತ ಶ್ರೀ ರನೀಲ್ ವಿಕ್ರಮಸಿಂಘೆ ಅವರು ಜೂನ್ 9 ರಂದು ಭಾರತಕ್ಕೆ ಭೇಟಿ ನೀಡಿದ್ದರು. ಈ ಐತಿಹಾಸಿಕ ಕ್ಷಣ ನಡೆದ ಕೆಲವೇ ದಿನಗಳಲ್ಲಿ ಭಾರತೀಯ ವಿದೇಶಾಂಗ ವ್ಯವಹಾರಗಳ ಸಚಿವರು ಶ್ರೀಲಂಕಾಕ್ಕೇ ಭೇಟಿ ನೀಡಿದ್ದಾರೆ. ಇದಕ್ಕೂ ಮುಂಚೆ ವಿದೇಶಾಂಗ ವ್ಯವಹಾರಗಳ ಸಚಿವರು ನಾಲ್ಕು ಬಾರಿ ಶ್ರೀಲಂಕಾಕ್ಕೇ ಭೇಟಿ ನೀಡಿದ್ದರು. ಅದು 2021ರ ಜನವರಿ, 2022ರ ಮಾರ್ಚ್, 2023ರ ಜನವರಿ ಮತ್ತು 2023ರ ಅಕ್ಟೋಬರ್‌ನಲ್ಲಿ  ಆಗಿತ್ತು.

2. ಭೇಟಿ ಸಂದರ್ಭದಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವರು ಶ್ರೀಲಂಕಾದ ಘನತೆವೆತ್ತ ಅಧ್ಯಕ್ಷ ಶ್ರೀ ರನೀಲ್ ವಿಕ್ರಮಸಿಂಘೆ ಹಾಗೂ ಪ್ರಧಾನ ಮಂತ್ರಿ ಘನತೆವೆತ್ತ ಶ್ರೀ ದಿನೇಶ್ ಗುಣವರ್ಧನೆ ಅವರನ್ನು ಭೇಟಿಯಾದರು. ಮತ್ತು ತಮ್ ಸಹವರ್ತಿಯಾದ ಶ್ರೀಲಂಕಾದ ವಿದೇಶಾಂಗ ಸಚಿವ ಘನತೆವೆತ್ತ ಶ್ರೀ ಎಂ.ಯು.ಎಂ. ಅಲಿ ಸಬ್ರಿ ಅವರೊಂದಿಗೆ ಸಭೆ ನಡೆಸಿದರು. ರಾಷ್ಟ್ರಪತಿ ಭವನದಲ್ಲಿ ನಡೆದ ಈ ಸಭೆಯಲ್ಲಿ ಅಧ್ಯಕ್ಷ ವಿಕ್ರಮಸಿಂಘೆ ಅವರು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವರನ್ನು ಸ್ವಾಗತಿಸಿದರು. ನಂತರ ಬಂದರು, ಹಡಗು ಮತ್ತು ವಾಯುಯಾನ ಸಚಿವರಾದ ಗೌರವಾನ್ವಿತ ಶ್ರೀ ನಿಮಲ್ ಸಿರಿಪಾಲ್ ಡಿ ಸಿಲ್ವಾ, ಕೃಷಿ ಹಾಗ ತೋಟಗಾರಿಕಾ ಇಲಾಖೆ ಸಚಿವರಾದ ಗೌರವಾನ್ವಿತ ಶ್ರೀ ಮಹಿಂದಾ ಅಮರವೀರ, ವಿದೇಶಾಂಗ ವ್ಯವಹಾರಗಳ ಸಚಿವರಾದ ಘನತೆವೆತ್ತ ಶ್ರೀ  ಎಂ.ಯು.ಎಂ. ಅಲಿ ಸಬ್ರಿ ಹಾಗೂ ವಿದ್ಯುತ್ ಮತ್ತು ಇಂಧನ ಸಚಿವರಾದ ಘನತೆವೆತ್ತ ಶ್ರೀ ಕಾಂಚನ ವಿಜೇಶೇಖರ್ ಅವರನ್ನೊಳಗೊಂಡ ನಿಯೋಗ ಮಟ್ಟದ ಸಭೆಯಲ್ಲಿ ಭಾಗವಹಿಸಿ ಮಾತುಕತೆ ನಡೆಸಿದರು.

3. ಭೇಟಿ ಸಂದರ್ಭದಲ್ಲಿ ಶ್ರೀಲಂಕಾ ಅಧ್ಯಕ್ಷ ವಿಕ್ರಮಸಿಂಘೆ ಹಾಗೂ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವರಾದ ಎಸ್. ಜಯಶಂಕರ್ ಅವರು ಜಂಟಿಯಾಗಿ ಕೊಲಂಬೊ ಮತ್ತು ತ್ರಿಂಕೋಮಲಿ ಜಿಲ್ಲೆಗಳಲ್ಲಿ ಮಾದರಿ ಗ್ರಾಮ ವಸತಿ ಯೋಜನೆಯಡಿಯಲ್ಲಿ 48 ಮನೆಗಳನ್ನು ಹಸ್ತಾಂತರಿಸಿದರು. ಕ್ಯಾಂಡಿ, ಮಟಾಲೆ ಹಾಗೂ ನುವಾರಾ ಎಲಿಯಾ ಜಿಲ್ಲೆಗಳಲ್ಲಿ ಭಾರತೀಯ ವಸತಿ ಯೋಜನೆಗೆ ಸಂಬಂಧಿಸಿದ ಮೂರನೇ ಹಂತದ 106 ಮನೆಗಳನ್ನೂ ಹಸ್ತಾಂತರಿಸಲಾಯಿತು. ಭಾರತದ 6 ಮಿಲಿಯನ್ ಡಾಲರ್ ಅನುದಾನದೊಂದಿಗೆ, ಸಮುದ್ರದಲ್ಲಿ ಶೋಧನೆ ಹಾಗೂ ರಕ್ಷಣಾ ಕಾರ್ಯಾಚರಣೆಗಳ ’ನರ್ವ್ ಸೆಂಟರ್ ಫಾರ್ ಸರ್ಚ್ ಆಂಡ್ ರೆಸ್ಕ್ಯೂ ಆಪರೇಶನ್ಸ್’ (ಎಂಆರ್‌ಸಿಸಿ) ಕೇಂದ್ರವನ್ನು ಸಹ ವರ್ಚುವಲ್

ಸಮಾರಂಭದಲ್ಲಿ ಜಂಟಿಯಾಗಿ ನಿಯೋಜಿಸಲಾಗಿಯಿತು. ಈ ಮೂಲಕ ಭಾರತ ಹಾಗೂ ಶ್ರೀಲಂಕಾದ ಸಮಗ್ರ ಹಾಗೂ ಜನ ಕೇಂದ್ರಿತ ಅಭಿವೃದ್ಧಿ ಸಹಕಾರದ ಸ್ವರೂಪಕ್ಕೆ ಸಾಕ್ಷಿಯಾದರು.

4. ಶ್ರೀಲಂಕಾ ಸರ್ಕಾರದ ನಾಯಕರುಗಳೊಂದಿಗೆ ವಿದೇಶಾಂಗ ಸಚಿವರು ನಡೆಸಿದ ಈ ಸಂವಾದವು ಭಾರತ ಹಾಗೂ ಶ್ರೀಲಂಕಾದ ಬಹುಮುಖಿ ಪ್ರಗತಿಯನ್ನು ಪರಿಶೀಲಿಸಲು ಹಾಗೂ ವೇಗವನ್ನು ವರ್ಧಿಸಲು ಹೆಚ್ಚಿನ ಅವಕಾಶವನ್ನು ಒದಗಿಸಿಕೊಡಲಿದೆ. 2023ರ ಜುಲೈ ತಿಂಗಳಿನಲ್ಲಿ ಶ್ರೀಲಂಕಾದ ಅಧ್ಯಕ್ಷ ವಿಕ್ರಮಸಿಂಘೆ ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಹಾಗೂ ಶ್ರೀಲಂಕಾ ಅಧ್ಯಕ್ಷರು ಅಂಗೀಕರಿಸಿದ್ದ ದೂರದೃಷ್ಟಿಯ ದಾಖಲೆಗಳ ವಿಷಯವು ಈಗಿನ ಚರ್ಚೆಯ ಪ್ರಮುಖ ವಿಷಯವಾಗಿತ್ತು. ಪ್ರಸ್ತುತ ನಡೆಯುತ್ತಿರುವ ಯೋಜನೆಗಳಿಗೆ, ವಿಶೇಷವಾಗಿ ಇಂಧನ, ಭೌತಿಕ ಮೂಲಸೌಕರ್ಯ ಮತ್ತು ಆರ್ಥಿಕ ಮತ್ತು ಜನರ ನಡುವಿನ ಸಂಬಂಧ ಸೇರಿದಂತೆ ಎಲ್ಲಾ ಯೋಜನೆಗಳಿಗೆ ಸಂಪರ್ಕವನ್ನು ಉತ್ತೇಜಿಸುವ ಉಪಕ್ರಮಗಳಿಗೆ ಈ ಚರ್ಚೆಯು ವೇಗವನ್ನು ನೀಡಿತು.

5. ವಿದೇಶಾಂಗ ವ್ಯವಹಾರಗಳ ಸಚಿವರಾದ ಎಸ್. ಜಯಶಂಕರ್ ಅವರು ಶ್ರೀಲಂಕಾದ ಮಾಜಿ ಅಧ್ಯಕ್ಷ ಘನತೆವೆತ್ತ ಶ್ರೀ ಮಹೇಂದ್ರ ರಾಜಪಕ್ಸೆ, ವಿರೋಧ ಪಕ್ಷದ ನಾಯಕರಾದ ಘನತೆವೆತ್ತ ಶ್ರೀ ಸಜಿತ್ ಪ್ರೇಮದಾಸ್ ಹಾಗೂ ಉತ್ತರ, ಪೂರ್ವ ಹಾಗೂ ಇನ್ನುಳಿದ ವಿವಿಧ ರಾಜಕೀಯ ಪಕ್ಷಗಳ ನಾಯಕರುಗಳೊಂದಿಗೆ ಪ್ರತ್ಯೇಕ ಸಭೆಯನ್ನು ನಡೆಸಿದರು. ಪಕ್ಷಾತೀತವಾಗಿ, ಭಾರತ ಶ್ರೀಲಂಕಾದ ಬಲಿಷ್ಠವಾದ ಪಾಲುದಾರಿಕೆಯು ಎರಡೂ ದೇಶಗಳ ಪ್ರಜೆಗಳ ಮುಂದುವರಿದ ಬೆಳವಣಿಗೆ ಹಾಗೂ ಸಮೃದ್ಧಿಗೆ ಸಹಕಾರಿಯಾಗಲಿದೆ.

6. ಭಾರತದ ವಿದೇಶಾಂಗ ವ್ಯವಹಾರಗಳ ಸಚಿವರ ಶ್ರೀಲಂಕಾ ಭೇಟಿಯು, ಭಾರತದ 'ನೆರೆಹೊರೆಯವರು ಮೊದಲು' ನೀತಿ ಹಾಗೂ ಸಾಗರ್ ದೃಷ್ಟಿಕೋನದಲ್ಲಿ ಭಾರತದೊಂದಿಗೆ ಶ್ರೀಲಂಕಾ ಹೊಂದಿರುವ ಕೇಂದ್ರ ಸ್ಥಾನವನ್ನು ಒತ್ತಿ ಹೇಳುತ್ತದೆ. ಶ್ರೀಲಂಕಾದ ಆರ್ಥಿಕ ಚೇತರಿಕೆ ಮತ್ತು ಸ್ಥಿರೀಕರಣದ ನಂತರ, ಶ್ರೀಲಂಕಾದ ಸುಸ್ಥಿರ ಮತ್ತು ಸಮಾನ ಬೆಳವಣಿಗೆಗೆ ಹಾಗೂ ಹಿಂದೂ ಮಹಾಸಾಗರ ಪ್ರದೇಶದಲ್ಲಿ ಪರಸ್ಪರ ಸಮೃದ್ಧಿಗೆ ಆದ್ಯತೆಯಾಗಿ ಆಳವಾದ ದೀರ್ಘಕಾಲೀನ ಆರ್ಥಿಕ ಸಹಕಾರವನ್ನು ರೂಪಿಸುವ ವಿಷಯದ ಬಗ್ಗೆಯೂ ಈ ಭೇಟಿ ಸಂದರ್ಭದಲ್ಲಿ ಹೆಚ್ಚಿನ ಒತ್ತು ನೀಡಲಾಯಿತು.

**ಕೊಲಂಬೊ**

**ಜೂನ್ 20, 2024**